ಆಯಾಸವಾಗುತ್ತಿತ್ತು. ಬೆನ್ನಿನಲ್ಲಿ ಆಗಾಗ ತೀವ್ರ ನೋವು ಕಾಣಿಸಿಕೊಳ್ಳುತ್ತಿತ್ತು. ಹೇಳಿದಂತೆ ಜಾರ್ಜ್ 5 ಬಂದಾಗ ನನ್ನನ್ನು ಮೈಸೂರು ಮಹಾರಾಜರು ಕರೆಸಿಕೊಂಡರು. ಆಂಗ್ಲ ದೊರೆಯೊಂದಿಗೆ ಬೇಟೆಗೂ ನಾನೇ ಜೊತೆಗೆ ಹೋದೆ. ಆನೆಗಳ 'ಖೆಡ್ಡಾ' (ಹಳ್ಳಕ್ಕೆ ಕೆಡವುವ ಪರಿ) ನೋಡಿ ನನಗೇಕೋ ಮನಸ್ಸಿಗೆ ತುಂಬಾ ಖೇದವಾಯಿತು. ಆನೆಗಳನ್ನು ತುಂಬಾ ಪ್ರೀತಿಸುವ ನಾನು ಇದನ್ನು ನೋಡಲಾರದಾದೆ. ಆಂಗ್ಲ ದೊರೆಗಳು ಹೊರಟ ನಂತರ ಕಿಳಿಮಾನೂರಿಗೆ ಹಿಂತಿರುಗಿದೆ.

ಒಂದು ದಿನ ನಾನು ಬೆಳಿಗ್ಗೆ ಏಳುವಾಗಲೇ ಹೊರಗೆ ಶಹನಾಯ್ ವಾದನ ಕೇಳಿಸಿತು. ಮಂಗಳ ನನ್ನ ಕೋಣೆಗೆ ಬಂದಳು. 'ಅಣ್ಣಾ, ಏಳು ಮಂಗಳಸ್ನಾನ ಮಾಡು' ಎಂದಳು. ನಾನು ಬೆಚ್ಚಿದೆ. ತಮ್ಮಂದಿರನ್ನು ಕಳೆದುಕೊಂಡು, ಕರ್ಮಾಂತರ ಮಾಡುತ್ತಿರುವ ನನಗೆ ಮಂಗಳಸ್ನಾನವೇ? 'ಏನಿದೆಲ್ಲ?' ಎಂದೆ.

'ಅಣ್ಣ ಬೇರೆಯವರಿಗಾಗಿಯೇ ಸದಾ ದುಡಿಯುವ ನೀನು, ನಿನ್ನನ್ನೇ ಮರೆತು ಬಿಟ್ಟಿದ್ದೀಯ. ಒಂದು ವಾರದಿಂದ ನಾವೆಲ್ಲ ನಿನ್ನ 56ನೇ ಹುಟ್ಟುಹಬ್ಬದ ತಯಾರಿ ನಡೆಸುತ್ತಿದ್ದರೂ ನಿನಗೆ ಅದರ ಕಡೆ ಗಮನವೇ ಇಲ್ಲ. ನಮ್ಮ ಮನೆಯಲ್ಲಿ ನೀನೇ ಹಿರಿಯ. ನಿನ್ನ ಆಶೀರ್ವಾದ ಎಲ್ಲರನ್ನೂ ಕಾಪಾಡಲಿ. ಬಾ ಅಣ್ಣ ತೈಲ ಅಭ್ಯಂಜನ ಮಾಡಿ, ಹೊಸ ಬಟ್ಟೆ ಧರಿಸು. ಮೊಮ್ಮಕ್ಕಳೆಲ್ಲಾ ಸಂಭ್ರಮದಿಂದ ನಿನಗಾಗಿ ಕಾಯುತ್ತಿದ್ದಾರೆ.' ಅವರೆಲ್ಲರನ್ನು ನಿರಾಶೆಗೊಳಿಸುವ ಮನಸ್ಸಾಗದೆ, ಜನ್ಮದಿನದ ಕಲಾಪಗಳಿಗೆ ಒಪ್ಪಿಕೊಂಡೆ. ಮರುದಿನ ನಾನು ಮಂಗಳೆಯೊಂದಿಗೆ ಮಾತನಾಡುತ್ತಾ ಹೇಳಿದೆ 'ಮಂಗಳಾ, ನನಗೊಂದು ಆಸೆ, ಅರವತ್ತು ವರ್ಷಗಳ ಸಂವತ್ಸರದ ಚಕ್ರ ಮುಗಿಸಿದ ಮೇಲೆ ನಾನು, ಏಳಂಗಿಯಲ್ಲಿ ಒಂದು ಆಶ್ರಮ ಕಟ್ಟಿಕೊಂಡು ಸನ್ಯಾಸಿಯಂತೆ ಇರಬೇಕೆಂದುಕೊಂಡಿದ್ದೇನೆ. ಈ ಬಣ್ಣ, ಕುಂಚ, ಬಣ್ಣದ ತಟ್ಟೆ, ಕ್ಯಾನ್ವಾಸ್, ಮರದ ಚೌಕಟ್ಟು ಎಲ್ಲವನ್ನೂ ಬಿಟ್ಟುಬಿಡಬೇಕೆಂದಿದ್ದೇನೆ. ವಿಶ್ರಾಂತ ಜೀವನ ನಡೆಸಬೇಕೆಂದಿದ್ದೇನೆ.'

'ಇದೇನಣ್ಣ? ಈ ಮನೆಗೆ ಶಾಪವೇ? ಮಾವ ರಾಜರಾಜವರ್ಮ ಸನ್ಯಾಸ ಸ್ವೀಕರಿಸಿದರು. ಅಣ್ಣಂದಿರಿಬ್ಬರೂ ಬಿಟ್ಟೇ ಹೊರಟುಹೋದರು. ಇರುವವನು ನೀನೊಬ್ಬ; ನೀನೂ ಹೀಗೆ ಹೇಳಿದರೆ ನಾವೆಲ್ಲಾ ಏನು ಮಾಡಬೇಕು?'. 'ಮಂಗಳಾ, ಒಬ್ಬ ಕಲಾವಿದ ತಾನು ಚಿತ್ರಿಸುವ ಪ್ರತಿ ಪಾತ್ರದ ಪರಕಾಯ ಪ್ರವೇಶ ಮಾಡಿದಾಗಲೇ ಆ ಚಿತ್ರ ನೈಜರೂಪ ಪಡೆಯುವುದು. ಇದರಿಂದ ಅವನು ಭಾವನಾತ್ಮವಾಗಿ ಆಯಾಸಗೊಳ್ಳುತ್ತಾನೆ. ಹೀಗೆ ಐವತ್ತು ವರ್ಷಗಳಿಂದ ಮಾಡುತ್ತಾ ಬಂದಿರುವ ನನ್ನ ಮೆದುಳಿಗೆ, ನನ್ನ ದೇಹಕ್ಕೆ, ನನ್ನ ಮನಸ್ಸಿಗೆ ತುಂಬಾ ಆಯಾಸವಾಗಿದೆ ಮಂಗಳಾ! ಅದಕ್ಕೆ ವಿಶ್ರಾಂತಿ ಅಗತ್ಯವಿದೆ. ಎರಡು ಬಾರಿ ನಾನು ಚಿತ್ರ ರಚಿಸುವಾಗ ಕುಂಚ ಕೆಳಗೆ ಬಿದ್ದಿತು. ಇದೇ ನಾನು ಚಿತ್ರರಚನೆ ನಿಲ್ಲಿಸಬೇಕೆಂಬುದರ ಸೂಚನೆ ಎಂದು ಭಾವಿಸುತ್ತೇನೆ.'

ಒಂದು ವಾರದಲ್ಲೇ ನನ್ನ ಬೆನ್ನಿನ ನೋವು ತೀವ್ರವಾಗಿ ಶಸ್ತ್ರಚಿಕಿತ್ಸೆ ಮಾಡಲೇಬೇಕಾದ ಸ್ಥಿತಿ ಬಂದಿತು. ಭಾರತದ ಪ್ರಖ್ಯಾತ ಸರ್ಜನ್‌ಗಳೆಲ್ಲಾ ಕಿಳಿಮಾನೂರಿಗೆ ಬಂದರು. ಸರ್ಜನ್ ನಾರಾಯಣ ಪಿಳ್ಳೈ ತಿರುವನಂತಪುರದಿಂದ ಬಂದು ನನ್ನ ಬೆನ್ನಿನ ಶಸ್ತ್ರಚಿಕಿತ್ಸೆ ಮಾಡಲು ಒಪ್ಪಿಗೆ ಪಡೆದರು.



ರಾಧಾ—ಮಾಧವ

## ಫ್ರೆನಾ

ಬೆನ್ನಿನ ಶಸ್ತ್ರಚಿಕಿತ್ಸೆ ಮುಗಿದ ಮೇಲೆ ರವಿವರ್ಮ ಸ್ವಲ್ಪ ಚೇತರಿಸಿಕೊಂಡಿದ್ದಾನೆಂದು ನಾಡಿನ ಪತ್ರಿಕೆಗಳಲೆಲ್ಲಾ ಬಂದಾಗ ನಾನು ಬೊಂಬಾಯಿನಲ್ಲಿ ಇರಲಾರದಾದೆ. ರೈಲಿನ ಪಯಣದ ನಂತರ ನಲವತ್ತು ಮೈಲಿಗಳು ಎತ್ತಿನಗಾಡಿಯಲ್ಲಿ ಪಯಣಿಸಬೇಕೆಂಬ ಅರಿವಿದ್ದರೂ, ನಾನು ರವಿವರ್ಮನನ್ನು ಕಾಣಲೇಬೇಕೆಂದು ಕಿಳಿಮಾನೂರಿಗೆ ಬಂದೆ. ಆ ದಿನ 1906ರ ಅಕ್ಟೋಬರ್ ಎರಡು. ನನ್ನನ್ನು ನೋಡಿದ ರವಿವರ್ಮ ನನ್ನ ಕೈಹಿಡಿದು 'ನಾನು ಕಲಾವಿದನಾಗಿ ಸೋತೆ ಫ್ರೆನಾ. ನನಗೆ ರಾಜಕುಟುಂಬದವರ ಭಾವಚಿತ್ರಗಳೂ ಹಾಗೂ ಪುರಾಣದ ಘಟನೆಗಳನ್ನು ಬಿಟ್ಟು ಬೇರೇನನ್ನೂ ಬರೆಯಲು ಬರುವುದಿಲ್ಲ. ನೀನು ಹೇಳಿದಂತೆ ಪ್ರಕೃತಿಯ, ಸಾಮಾನ್ಯ ಜನರ ಚಿತ್ರಣ ಮಾಡಿ ನೋಡಿದೆ. ಆದರೆ ನಾನು ಅದರಲ್ಲಿ ಸಾಫಲ್ಯ ಪಡೆಯಲಿಲ್ಲ.'

ನಾನು ಅವನ ತಲೆ ನೇವರಿಸಿ ಹೇಳಿದೆ 'ರವಿವರ್ಮ, ಹಾಗೆಲ್ಲಾ ಭಾವಿಸಬೇಡ, ನೀನೆಲ್ಲೂ ಸೋತಿಲ್ಲ. ಸಾಂಪ್ರದಾಯಿಕ ಕಾಂಗ್ರಾ, ಮೊಘಲರ ಚಿತ್ರಣ ಶೈಲಿಗಳನ್ನು ಮುರಿದು ಒಂದು ಕ್ರಾಂತಿಕಾರಿ ಚಿತ್ರಕಲೆಯನ್ನು ಹುಟ್ಟು ಹಾಕಿರುವುದು ನೀನೇ ಅಲ್ಲವೇನು? ಅದಕ್ಕಿಂತ ದೊಡ್ಡ ಸಾಧನೆ ಯಾವುದಿದೆ? ನೈಜತೆಯನ್ನು ನಿನ್ನ ಚಿತ್ರಗಳಲ್ಲಿ ಕಾಣುತ್ತೇವಲ್ಲ. ಅದೇನು ಕಡಿಮೆ ಸಾಧನೆಯೇ? ಅಷ್ಟಲ್ಲದೆ ಚಿಕಾಗೋ ಪ್ರಶಸ್ತಿ ಪತ್ರದಲ್ಲಿ ಪಾಶ್ಚಾತ್ಯ ಮೌಲ್ಯಮಾಪನ ಮಾಡುವ ದಿಗ್ಗಜರು 'ಈ ಚಿತ್ರಗಳು ಪ್ರಗತಿಯ ಪ್ರತಿನಿಧಿಗಳು, ವಾಸ್ತವಿಕತೆಯ ಪ್ರತಿಬಿಂಬಗಳು ಎಂದು ಹೇಳಿದ್ದಾರೆ!'

ಕೈಯಲ್ಲಿ ಸಿತಾರ್ ಹಿಡಿದ 'ಕಾದಂಬರಿ', ಹಂಸ ದಮಯಂತಿ, ರಾಣಿ ಲಕ್ಷ್ಮೀಬಾಯಿ, ರಾಜಕುಮಾರಿ ತಾರಾಬಾಯಿ, ಯಶೋದ ಕೃಷ್ಣ, ಶಾಕುಂತಲೆಯ ಜನನ, ಜಟಾಯು ವಧೆ, ಕೇರಳದ ನಾಯರ್ ಸುಂದರಿ, ದರ್ಪಣ ಸುಂದರಿ, ಊರ್ವಶಿಪುರೂರವ, ಉಷಾ ಅನಿರುದ್ಧ, ಸೈರಂಧ್ರಿ ಕೀಚಕ, ದ್ರೌಪದಿ ವಸ್ತ್ರಾಪಹರಣ, ಸೀತಾ ಸ್ವಯಂವರ, ಶಂತನುಗಂಗೆ ಒಂದೇ ಎರಡೇ? ಹೇಳುತ್ತಾ ಹೋದರೆ ಪಟ್ಟಿ ಮುಗಿಯುವುದೇ ಇಲ್ಲ ರವಿವರ್ಮ! ಮೈಸೂರಿನ ಅರಮನೆ, ಅವುದ್ ಮ್ಯೂಸಿಯಂ, ಬರೋಡಾ ಆರ್ಟ್ ಗ್ಯಾಲರಿ, ಫತೇಸಿಂಗ್ ಮ್ಯೂಸಿಯಂ, ಮೇವಾರದ ಅರಮನೆ, ಮದರಾಸ್, ಚೆನ್ನೈ ಮ್ಯೂಸಿಯಂ, ಜಹಾಂಗೀರ್ ಆರ್ಟ್ ಗ್ಯಾಲರಿ, ನಿನ್ನ ಚಿತ್ರಪಟಗಳಿಲ್ಲದ ಚಿತ್ರಮಂಟಪವೇ ಇಲ್ಲವೇನೋ ಈ ಭಾರತದಲ್ಲಿ! ದೇಶ ವಿದೇಶಗಳಲ್ಲಿ ಬೆಳಗಿ ಬಂದಿರುವ ಈ ನಿನ್ನ ಖ್ಯಾತಿ, ನಿನ್ನಿಂದ ಹರಡಲ್ಪಟ್ಟ ಭಾರತದ ಸಂಸ್ಕೃತಿ, ನಿನ್ನ ಬದುಕನ್ನೇ ಒಂದು ಪುನೀತ ಗೀತೆಯಾಗಿಸಿಲ್ಲವೆ ರವಿ? ನೀನೊಬ್ಬ ರಾಜ ಕಲಾವಿದ! ಕಲಾವಿದರಲ್ಲಿ ರಾಜ! ಆ ತೃಪ್ತಿಯೊಂದು ಸಾಲದೆ ನಿನ್ನ ಜೀವಕ್ಕೆ?' ಎಂದು ಸಮಾಧಾನ ಹೇಳಿದೆ.

ರವಿವರ್ಮನ ವೈದ್ಯರನ್ನು ಭೇಟಿಯಾಗಿ ಅವನ ಪರಿಸ್ಥಿತಿ ಕೇಳಿ ತಿಳಿದುಕೊಂಡೆ. ಶಸ್ತ್ರಚಿಕಿತ್ಸೆಯಿಂದ ಅವನಿಗೆ ತುಂಬಾ ಸಹಾಯ ಏನಾಗಿಲ್ಲ ಎಂದು ತಿಳಿದುಬಂತು. ಅವನ ಅಂತ್ಯವನ್ನು ಕಾಣುವುದು ನನ್ನಿಂದ ಸಾಧ್ಯವಿಲ್ಲ ಎನಿಸಿತು. ಅಲ್ಲಿಯೇ ಇರಬೇಕೆಂದು ನನ್ನನ್ನು ವಿನಂತಿಸಿಕೊಂಡ ರಾಮವರ್ಮನನ್ನು ಕರೆದು ಹೇಳಿದೆ 'ರಾಮ, ರವಿವರ್ಮ ಅಜರಾಮರ! ಅವನಿಗೆ ಅಳಿವೇ ಇಲ್ಲ, ಅವನ ಕಲೆ ನಿರಂತರ, ಆದರೆ ಅವನ ದೇಹದ ಅಂತ್ಯವನ್ನು ನಾನು ನೋಡಲಾರೆ. ಇಂದು ಅವನ ಮಾತನಾಡುವ ಮುಖವನ್ನೇ, ಮುಗುಳ್ನಗೆಯನ್ನೇ ಮನದಲ್ಲಿಟ್ಟುಕೊಂಡು ಹೊರಟು ಹೋಗುತ್ತೇನೆ; ಅನುಮತಿಸು' ಎಂದು ಅವನ ಬೆನ್ನುದಡವಿದೆ.

ಮತ್ತೆ ಮಹಡಿ ಹತ್ತಿ ಹೇಳಿದೆ 'ರವಿ! ನಿನ್ನ ಅಪ್ಪ ಅಮ್ಮಾ ನಿನಗಿಟ್ಟ ಹೆಸರು ನಿಜಕ್ಕೂ ಅನ್ವರ್ಥವೇ ಸರಿ! ಬಾಲ ಸೂರ್ಯನ ಮೃದು ಶಾಖದ ಕಿರಣಗಳು ಭುವಿಯನ್ನು ಬೆಳಗುತ್ತದೆ. ಸೂರ್ಯ ಮೇಲೇರುತ್ತಿದ್ದಂತೆ ಮಧ್ಯಾಹ್ನದ ಭಾಸ್ಕರನ ಬಿರುಸು ಎಲ್ಲವನ್ನೂ ಸುಟ್ಟುಬಿಡುತ್ತದೆ. ಸಂಜೆಯಾಗುತ್ತಿದ್ದಂತೆ ರವಿಯ ಪ್ರಖರತೆ ಕಡಿಮೆಯಾಗುತ್ತದೆ. ಆಗ ದಿವಾಕರ, ಭೂಮಿತಾಯಿಯ ತೋಳ್ಗಳಲ್ಲಿ ಮಲಗಲು ಹಾತೊರೆಯುವ ಮಗುವಾಗುತ್ತಾನೆ. ನಿನ್ನಂತಹ ಕಲಾವಿದನ ಬದುಕು ಇದಕ್ಕಿಂತ ಬೇರೆಯಲ್ಲ. ರವಿ ಮುಳುಗಿದ ಮೇಲೂ ದಿಗಂತದಲ್ಲಿ ಕಾಣುವ ಬಣ್ಣಗಳಂತೆ, ಕಲಾವಿದನಾದ ನೀನು ಎಂದೆಂದೂ ಶಾಶ್ವತವಾಗಿ ರಸಿಕರ ಹೃದಯದಲ್ಲಿರುತ್ತೀಯೆ! ನಾನೀಗ ಹೊರಡುತ್ತೇನೆ ರವಿ; ನೀನು ವಿಶ್ರಮಿಸಿಕೋ' ಎನ್ನುತ್ತಾ ಅವನ ಹಣೆಗೆ ಮುತ್ತಿಟ್ಟೆ. ಆ ಸುಖವನ್ನು ಅನುಭವಿಸುತ್ತಾ ಅವನು ಮೆಲ್ಲನೆ ಕಣ್ಮುಚ್ಚಿಕೊಂಡು, ದೀರ್ಘ ಪಯಣಕ್ಕೆ ಸಿದ್ಧನಾದ.

(ಮುಗಿಯಿತು)